## ರಂಗೋಲಿ ವೈವಿಧ್ಯ




ಬೈಂದೂರಿನ ‘ವಿವೇಕ ಪರ್ವ’ದಲ್ಲಿ ಪ್ರದರ್ಶನಗೊಂಡ ರಂಗೋಲಿ

ಭಾವಣೆ ರಂಗೋಲಿ: ಪ್ರತಿನಿತ್ಯ ಹಾಕುವ ರಂಗೋಲಿ, ಹೊಸ್ತಿಲಿಗೆ ರಂಗೋಲಿ, ದೇವರಿಗೆ ರಂಗೋಲಿ, ಹಬ್ಬಗಳಲ್ಲಿ ಕೃಷಿ ಪರಿಕರಗಳ ರಂಗೋಲಿ, ಮದುವೆ ಮುಂಜಿ ಮುಂತಾದ ಮಂಗಳ ಕಾರ್ಯಗಳಲ್ಲಿ ರಂಗೋಲಿ, ಹೀಗೆ ಸಂದರ್ಭಗಳಿಗನುಸಾರ ರಂಗೋಲಿಯ ವಿನ್ಯಾಸ ಮತ್ತು ವಸ್ತು ವಿಷಯ ಬೇರೆಬೇರೆಯಾಗುತ್ತ ಹೋಗುತ್ತದೆ.

ಹಳೆಯ ಕಾಲದಲ್ಲಿ ಮರದ ಮುಚ್ಚಿಗೆ ಮನೆಯಿರುತ್ತಿತ್ತು. ಆ ಮುಚ್ಚಿಗೆಯ ಮೇಲೆ ರಂಗೋಲಿ ಬಿಡಿಸುತ್ತಿದ್ದರು. ಗಣಪತಿ ಹಬ್ಬದ ಸಂದರ್ಭದಲ್ಲಿ ಈ ರಂಗೋಲಿಯನ್ನು ಹಾಕಲಾಗುತ್ತದೆ. ಮೊದಲು ಮಣೆಯ ಮೇಲೆ ತೆಳ್ಳನೆಯ ಬಟ್ಟೆ ಇಟ್ಟು ಅದರ ಮೇಲೆ ರಂಗೋಲಿ ಹಾಕುತ್ತಾರೆ. ನಂತರ ಮೇಲಿನ ಭಾವಣೆಯನ್ನು ಒದ್ದೆ ಬಟ್ಟೆಯಲ್ಲಿ ಒರೆಸಿಕೊಂಡು ಆ ಭಾವಣೆಗೆ ಈ ರಂಗೋಲಿ ಹಾಕಿದ ಮಣೆಯನ್ನು ಒತ್ತುತ್ತಾರೆ. ಹೀಗೆ ಹಾಕಿದ ರಂಗೋಲಿ ವರ್ಷಾನುಗಟ್ಟಲೆ ಹಾಳಾಗದೇ ಇರುತ್ತದೆ.

ದಕ್ಷಿಣ ಕನ್ನಡದ ಕೋಟೇಶ್ವರದ ಸೊನಗಾರರೊಬ್ಬರ ಮನೆಯಲ್ಲಿ ಈ ರಂಗೋಲಿಯನ್ನು ಹಾಕಿ ಅದರ ಸುತ್ತ ಸೌತೇಕಾಯಿ ಕಟ್ಟುವುದನ್ನು ಭಾರತಿಯವರು ನೆನಪಿಸಿಕೊಳ್ಳುತ್ತಾರೆ.

ನೃತ್ಯರಂಗೋಲಿ: ಹಿಂದಿಯ ‘ಆಮ್ರಪಾಲಿ’ ಸಿನಿಮಾ ನೋಡಿದವರಿಗೆ ಈ ರಂಗೋಲಿ ನೆನಪಾಗದೇ ಇರದು. ವೈಜಯಂತಿ ಮಾಲಾ ಮತ್ತು ಇನ್ನೊಬ್ಬ ನೃತ್ಯಗಾತಿಯ ನಡುವೆ ನಡೆದ ಸ್ಪರ್ಧೆಯಲ್ಲಿ ನೆಲದ ಮೇಲೆ ರಂಗೋಲಿ ಚೆಲ್ಲಿ ಅದರ ಮೇಲೆ ನೃತ್ಯಮಾಡುತ್ತ ರಂಗೋಲಿ ಬಿಡಿಸುವ ದೃಶ್ಯವಿದೆ.

ಅಕ್ಬರನ ಕಾಲದಲ್ಲಿ ನೆಲದ ಮೇಲೆ ರಂಗೋಲಿ ಪುಡಿಹರಡಿ ಅದರ ಮೇಲೆ ತೆಳ್ಳನೆಯ ರತ್ನಗಂಬಳಿ ಹಾಕಿ ಅದರ ಮೇಲೆ ನೃತ್ಯಮಾಡುತ್ತ ಹೋಗಬೇಕು. ಕೊನೆಯಲ್ಲಿ ರತ್ನಗಂಬಳಿ ತೆಗೆದರೆ ಚೆಂದನೆಯ ರಂಗೋಲಿ ಬಿಡಿಸಿರುವ ಕುರಿತು ವಿವರಗಳು ಬರುತ್ತವೆ.

ಗಾನ ರಂಗೋಲಿ: ಪುಡಿ ಹರಡಿದ ಮೇಲೆ ಹಾಡು ಹೇಳುತ್ತ ರಂಗೋಲಿಯನ್ನು ಕೈ ಬೆರಳುಗಳ ಮೂಲಕ ತಿದ್ದುತ್ತ ಹೋಗಬೇಕು. ಹಾಡು ಮುಗಿಯುವ ಹೊತ್ತಿಗೆ ರಂಗೋಲಿ ಮುಗಿದಿರಬೇಕು.

ಕೆಲವು ಕಡೆ ಹೆದ್ದಾರಿಗಳ ಮೇಲೆ ದೊಡ್ಡ ಆಂಜನೇಯನ ಮತ್ತು ರಾಘವೇಂದ್ರ ರಂಗೋಲಿ ಹಾಕಿ ಭಿಕ್ಷೆ ಬೇಡುವುದೂ ಇದೆ.



ಮೂಡುಬಿದಿರಿಯ ಆಳ್ವಾಸ್ ಕಾಲೇಜಿನಲ್ಲಿ ಮತ್ತು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರ ಮ್ಯೂಸಿಯಂನಲ್ಲಿ ಆ ಪೇಂಟಿಂಗ್‌ಗಳನ್ನು ಈಗಲೂ ಕಾಣಬಹುದು’ ಎನ್ನುತ್ತಾರೆ ಭಾರತಿ.

### ರಂಗೋಲಿ ಕುರಿತ ಸಂಶೋಧನೆ

ಅಂಗಳದಲ್ಲಿ ಪ್ರತಿನಿತ್ಯ ಬಿಡಿಸುವ ಈ ಕಲೆಯನ್ನು ಸಂಶೋಧನೆಯ ವಿಷಯವಾಗಿ ಅದುವರೆಗೆ ಯಾರೂ ತೆಗೆದುಕೊಂಡಿರಲಿಲ್ಲ. ಆದರೆ ಭಾರತಿ ಪ್ರೊ. ಕನರಾಡಿಯವರ ಮಾತುಗಳಿಂದ ಪ್ರೇರಿತರಾಗಿ ಕರಾವಳಿ ‘ಕರ್ನಾಟಕದ ರಂಗೋಲಿ ಕಲೆ’ ಎಂಬ ವಿಷಯದಲ್ಲಿ ಪಿಎಚ್.ಡಿ. ಮಾಡಿದರು. ಅಧ್ಯಯನ ಮಾಡುತ್ತ ಹೋದಂತೆಲ್ಲ ಅಗಾಧವಾದ ಸಂಗತಿಗಳು ತೆರೆದುಕೊಳ್ಳುತ್ತಾ ಹೋದವು ಎಂದು ವಿವರಿಸುತ್ತಾರೆ ಭಾರತಿ.

ಚಿತ್ರಕಲೆಯ ಭಾಗವಾದ ರಂಗೋಲಿ ಒಂದು ಜನಪದ ಕಲೆ. ಜನಪದರು ಇದನ್ನು ಅಂಗಳ, ಗೋಡೆ, ಕಂಬ, ಪಾತ್ರೆ, ಮಣೆಗಳ ಮೇಲೆಲ್ಲ ಬರೆದು ತಮ್ಮ ಕಲಾ ನೈಪುಣ್ಯ ಪ್ರದರ್ಶಿಸಿದರು. ರಂಗೋಲಿ ಶೈಲಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತ ಹೋಗುತ್ತದೆ. ಈ ಭಿನ್ನತೆ ವಿನ್ಯಾಸ ಮಾತ್ರವಲ್ಲ, ಎಳೆಗಳಿಂದ, ಚುಕ್ಕಿಗಳಿಂದಲೂ ಭಿನ್ನವಾಗುತ್ತದೆ. ಪರಿಕರಗಳು ಕೂಡ.

ನಮ್ಮಲ್ಲಿ ಶೇಡಿಯನ್ನು ಬಳಸುತ್ತಾರೆ.